**<u>ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ ಉಡುಪಿ</u>**

**<u>ಸೆಷನ್ಸ್ ಕೇಸ್ ನಂಃ 5/2019</u>** <u>ಪಿ.ಡಬ್ಲ್ಯುಃ 2</u>

<u>ಸಿ.ಡಬ್ಲ್ಯುಃ 4</u>

| | |
|---|---|
| ಸಾಕ್ಷಿದಾರರ ಹೆಸರು | ರಾಜೇಶ್ ಎಸ್. |
| ತಂದೆಯ ಹೆಸರು | ದಿಃ ಸುಂದರ |
| ವಯಸ್ಸು | 40 ವರ್ಷ |
| ಉದ್ಯೋಗ | ಮೊಬೈಲ್ ಅಂಗಡಿ |
| ವಿಳಾಸ | ಪಡುಬಿದ್ರೆ |

ದಿನಾಂಕಃ 05-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ</u>**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ನಾನು 2015 ರಿಂದ ಪಡುಬಿದ್ರೆಯ ಕೆಳಗಿನ ಪೇಟೆಯಲ್ಲಿ ಎವರ್ ಗ್ರೀನ್ ಎಂಬ ಹೆಸರಿನ ಮೊಬೈಲ್ ಅಂಗಡಿಯನ್ನು ನಡೆಸಿಕೊಂಡು ಬರುತ್ತಿದ್ದೇನೆ. ನನಗೆ ಚಾಸಾ-1 ರಿಂದ 3 ಗೊತ್ತು. ನನ್ನ ಅಂಗಡಿಯ ಪಕ್ಕದಲ್ಲಿ ಕರ್ನಾಟಕ ಬ್ಯಾಂಕಿನ ಎಟಿಎಂ ಇದೆ ಹಾಗೂ ಇನ್ನೊಂದು ಪಕ್ಕದಲ್ಲಿ ಚಾಸಾ-3 ಇವರ ಅಂಗಡಿ ಇದೆ. ತಾರೀಕು 02-09-2018 ರಂದು ಚಾಸಾ-2, ನನಗೆ ಬೆಳಿಗ್ಗೆ 6.30 ಗಂಟೆಗೆ ಕರೆ ಮಾಡಿ, ನನ್ನ ಅಂಗಡಿಯ ಬೀಗವನ್ನು ಯಾರೋ ಮುರಿದಿದ್ದಾರೆ ಎಂದು ತಿಳಿಸಿದ್ದರು. ಕೂಡಲೇ ನಾನು ಅಂಗಡಿಯ ಬಳಿ ಹೋದಾಗ, ಅಲ್ಲಿ ಚಾಸಾ-1 ಮತ್ತು 2 ಇದ್ದರು, ನನ್ನ ಅಂಗಡಿಯನ್ನು ಪರಿಶೀಲಿಸಿದಾಗ, ಬೀಗವನ್ನು ಮುರಿಯಲಾಗಿದ್ದು, ನಾವು ಒಳಗಡೆ ಹೋಗಿ ನೋಡಿದಾಗ, ನನ್ನ ಅಂಗಡಿಯಲ್ಲಿ ಇದ್ದ 35 ಮೊಬೈಲ್ ಗಳು ಸುಲಿಗೆಯಾಗಿದ್ದು ಕಂಡುಬಂದಿತ್ತು.

2) ಅದೇ ಸಮಯ ಚಾಸಾ-3 ಅವರ ಅಂಗಡಿಯ ಬಳಿ ಬಂದು ನೋಡಿದಾಗ, ಅವರ ಅಂಗಡಿಯಿಂದ ಬೆಳ್ಳಿಯ ಆಭರಣಗಳುಮತ್ತು ಚಿನ್ನಾಭರಣಗಳು ಸುಲಿಗೆ ಆಗಿದ್ದು

ಕಂಡುಬಂದಿತ್ತು. ಆ ಬಗ್ಗೆ ನಾನು ಚಾಸಾ-1 ರವರನ್ನು ವಿಚಾರಿಸಿದಾಗ, ರಾತ್ರಿ ಎಟಿಎಂ ಕರ್ತವ್ಯದಲ್ಲಿದ್ದಾಗ, 4-5 ಜನ ವ್ಯಕ್ತಿಗಳು ಎಟಿಎಂಗೆ ಬಂದು, ಅವರಿಗೆ ಚಾಕು ತೋರಿಸಿ, ಬೆದರಿಸಿ, ಬಾಯಿಗೆ ಬಟ್ಟೆ ಕಟ್ಟಿ ಎಟಿಎಂನಿಂದ ಹೊರಗೆ ಎಳೆದುಕೊಂಡು ಬಂದು, ಕೈಕಾಲುಗಳನ್ನು ಬಟ್ಟೆಗಳಿಂದ ಕಟ್ಟಿ, ಅವರನ್ನು ಪೊದೆಗೆ ಎಸೆದು, ಆತನಲ್ಲಿ ಇದ್ದ ಒಂದು ಸ್ಯಾಮಸಂಗ್ ಮೊಬೈಲ್, ನಗದು ಹಣ ರೂಃ 400 ನ್ನು ಸುಲಿಗೆ ಮಾಡಿಕೊಂಡು ಹೋಗಿರುವುದಾಗಿ ತಿಳಿಸಿದ್ದರು.

3) ನಂತರ ಈ ಬಗ್ಗೆ ಚಾಸಾ-1 ಪೊಲೀಸರಿಗೆ ದೂರು ಕೊಟ್ಟಿರುತ್ತಾರೆ. ಚಾಸಾ-1 ಈಗ ಮೃತಪಟ್ಟಿರುತ್ತಾರೆ. ಆ ದೂರಿಗಾಗಿ ನನ್ನನ್ನು ವಿಚಾರಣೆ ಮಾಡಿದ್ದರು. ಅದೇ ದಿನ ಪೊಲೀಸರು ಸ್ಥಳ ತನಿಖೆಗಾಗಿ ಎಟಿಎಂ ಬಳಿ ಹಾಗೂ ನನ್ನ ಮತ್ತು ಚಾಸಾ-3 ಇವರ ಅಂಗಡಿಯ ಬಳಿ ಬಂದಿದ್ದರು. ನಾನು ಹಾಗೂ ಚಾಸಾ-1 ರಿಂದ 3, ಸ್ಥಳಗಳನ್ನು ತೋರಿಸಿದ ಮೇರೆಗೆ, ಪೊಲೀಸರು ನಿಪಿ-2 ರಂತೆ ಮಹಜರು ಮಾಡಿ, ನಮ್ಮ ಸಹಿ ಪಡೆದಿದ್ದರು. ನಿಪಿ-2 ರಲ್ಲಿ ನನ್ನ ಸಹಿ **ನಿಶಾನೆ ಪಿ-2(ಬಿ)** ಎಂದು ಗುರುತಿಸಿದ್ದೇನೆ.

4) ಪಂಚನಾಮೆ ಕಾಲದಲ್ಲಿ ಚಾಸಾ-1 ಇವರಿಗೆ ಕೈಕಾಲುಗಳನ್ನು ಕಟ್ಟಲು ಬಳಸಿದ್ದ 5 ಬಟ್ಟೆ ತುಂಡುಗಳನ್ನು ಹಾಗೂ ಚಾಸಾ-1 ಇವರ ಅಂಗಿಯನ್ನು ಪೊಲೀಸರು ವಶಪಡಿಸಿಕೊಂಡಿದ್ದರು. ಅವುಗಳನ್ನು ಈಗಾಗಲೇ ಎಂಒ-1 ರಿಂದ 5 ಎಂದು ಗುರುತಿಸಲಾಗಿದೆ. ಪಂಚನಾಮೆ ಕಾಲದಲ್ಲಿ ಚಾಸಾ-3 ರವರ ಅಂಗಡಿಯ ಬಳಿ ಬಿದ್ದಿದ್ದ ಹಳೆಯ ಜಖಂ ಗೊಂಡ ಬೀಗ, ಜಖಂಗೊಂಡಿರುವ ಕಬ್ಬಿಣದ ಬೀಗ ಹಾಗೂ ಅದರ ಕೊಂಡಿ, ಹಾಗೂ ಇನ್ನೊಂದು ಜಖಂಗೊಂಡ ಹಳೆಯ ಕಬ್ಬಿಣದ ಬೀಗ, ಒಂದು ಸಿಸಿ ಕ್ಯಾಮಾರದ ಭಾಗ, ಹಾಗೂ ಒಂದು ಕಬ್ಬಿಣದ ತುಂಡರಿಸುವ ಕಟ್ಟರ್ ನ್ನು ಪೊಲೀಸರು ವಶಪಡಿಸಿಕೊಂಡಿದ್ದರು. ಅವುಗಳನ್ನು ಈಗಾಗಲೇ ಎಂಒ-6 ರಿಂದ 10 ಎಂದು ಗುರುತಿಸಲಾಗಿದೆ.

5) ಸದರಿ ಪಂಚನಾಮೆ ಕಾಲದಲ್ಲಿ ಪೊಲೀಸರು ನನ್ನ ಅಂಗಡಿಯಲ್ಲಿ ಇದ್ದ 5 ಇನ್ವಾಯಿಸ್ ಗಳನ್ನು ಜಪ್ತು ಮಾಡಿದ್ದರು. ಸದರಿ 5 ಇನ್ವಾಯಿಸ್ ಗಳನ್ನು ಈಗ ನೋಡಿ ಅದನ್ನು ಈಗಾಗಲೇ **ನಿಶಾನೆ ಪಿ-3 ರಿಂದ 7** ಎಂದು ಗುರುತಿಸಲಾಗಿದೆ. ನಿಶಾನೆ ಪಿ-

2ರ ಸಮಯದಲ್ಲಿ ತೆಗೆದ 7 ಪೋಟೋಗಳನ್ನು ತೆಗೆದಿದ್ದರು. ಅದನ್ನು ಈಗಾಗಲೇ **ನಿಶಾನೆ ಪಿ-8** ಎಂದು ಗುರುತಿಸಲಾಗಿದೆ.

7) ಘಟನೆಯಾದ ಒಂದು ತಿಂಗಳ ನಂತರ ನನ್ನನ್ನು ಪೊಲೀಸರು ಠಾಣೆಗೆ ಕರೆಯಿಸಿದ್ದರು. ಠಾಣೆಯಲ್ಲಿ ಪೊಲೀಸರು 1 ರಿಂದ 5 ನೇ ಆರೋಪಿತರನ್ನು ತೋರಿಸಿ, ಅವರೇ ದರೋಡೆ ಮಾಡಿದ ವ್ಯಕ್ತಿಗಳು ಎಂದು ತಿಳಿಸಿದ್ದರು. ಹಾಗೂ ಆರೋಪಿತರಿಂದ ವಶಪಡಿಸಿಕೊಂಡ ಒಂದು ಚಾಕು ಮತ್ತು 5 ಮೊಬೈಲ್ ಗಳನ್ನು ತೋರಿಸಿದ್ದರು. ಸದರಿ ಚಾಕುವನ್ನು ನೋಡಿದರೆ ಗುರುತಿಸಬಲ್ಲೆ. ಅದನ್ನು ಈಗಾಗಲೇ **ಎಂಓ-11** ಎಂದು ಗುರುತಿಸಿದೆ. 5 ಮೊಬೈಲ್ ಗಳನ್ನು ನನ್ನ ವಶಕ್ಕೆ ಪಡೆದುಕೊಂಡಿದ್ದೆ. ಆದಿನ ಠಾಣೆಯಲ್ಲಿ ನೋಡಿದ 1 ರಿಂದ 5 ನೇ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ.

ಪಾಟಿಸವಾಲುಃ ಆರೋಪಿತರು ತಲೆತಪ್ಪಿಸಿಕೊಂಡಿದ್ದರಿಂದ ಇಲ್ಲ ಎಂದು ತೆಗೆದುಕೊಂಡಿತು.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.